ಸುರಿದು ತಪಸ್ವಿಯು ಸಿಂಹ ಗಾಂಭೀರ್ಯದಿಂದ ಎದ್ದನು. ಸಿಂಹದಂತೆ ದೂರದಲ್ಲಿ ನಿಂತು ಹಿಂದಕ್ಕೆ ತಿರುಗಿ ನೋಡದೆ (ಸಿಂಹಾವಲೋಕನ) ಕಾಡಿನಲ್ಲಿ ನಡೆಯುತ್ತ ಒಮ್ಮೆಗೆ ಮರೆಯಾದನು.

ನಾರಿ ಕಂಬದಂತೆ ಅಲ್ಲಿ ನಿಂತಳು. ದುಃಖಿತಳಾಗಿ ಮಾತಾಡಲಾಗದ ಮೌನದಲ್ಲಿ ನಿಟ್ಟುಸಿರು ಬಿಟ್ಟಳು. ತನ್ನ ಕಣ್ಣನ್ನು ತಾನೆ ನಂಬಲಾರದೆ ಬೆಪ್ಪು ಬೆರಗಾದಳು. ಲಜ್ಜೆ, ಭಯ, ವಿಸ್ಮಯದ ಭಾರದಿಂದ ಕುಸಿದು ಕುಗ್ಗಿದಳು!

ಕೆಚ್ಚೆದೆಯ ಬೇಟೆಯ ಶಬರವೀರನು ಪಶ್ಚಿಮಘಟ್ಟದ ಭಯವನ್ನು ಹುಟ್ಟಿಸುವ ದಟ್ಟ ಹಾಗೂ ಭಯಂಕರ ವಿಸ್ತಾರದ ಘೋರ ಅರಣ್ಯದಲ್ಲಿ ಎತ್ತರ ಮತ್ತು ಕಡಿದಾದ ಎಡೆಗಳಲ್ಲಿ ಬೆಳಗಿನಿಂದ ಸಂಜೆಯವರೆಗೆ ಬೇಟೆಗಾಗಿ ಅಲೆದಾಡುವನು. ಆದರೆ ಯಾವುದೇ ಬೇಟೆ ಸಿಗದೆ ಬೇಸರದಿಂದ ಹಾಗೂ ಶರೀರದ ಆಯಾಸದಿಂದ ಕೋಪಗೊಂಡು ವಿಧಿಯನ್ನು ಬಾಯಿಗೆ ಬಂದಂತೆ ಬಯ್ಯುವನು. ಹೊತ್ತು ಇಳಿಯುತ್ತಿದ್ದಂತೆ ಹಸಿವು ಹೆಚ್ಚಿ ಬಾಣವನ್ನು ಬತ್ತಳಿಕೆಗೆ ಇಳಿಬಿಡುವನು. ಹತಾಶೆಯಿಂದ ಬಿಲ್ಲನ್ನು ಒಂದು ಕಡೆಗೆ ಎಸೆದು ಹಚ್ಚನೆಯ ಹಸುರಿನ ಮೇಲೆ ಕಾಡಿನ ತಣ್ಣೆಳಲಿನಲ್ಲಿ ಮಲಗುವನು.

ಅವನು ಹಾಗೆ ನಿದ್ರಾಸಮುದ್ರದಲ್ಲಿ ಲೀನವಾಗಿರಲು, ಹೊಟ್ಟೆ ತುಂಬಿ ತೃಪ್ತವಾದ ಭೀಮ ಭಯಂಕರ ಕರಡಿಯೊಂದು ಸುತ್ತಾಡುತ್ತ ಅಲ್ಲಿಗೆ ಬರುವುದು. ಅದು ಆ ಮನುಷ್ಯನ ಶರೀರವನ್ನು ಕಂಡು ಕುತೂಹಲದಿಂದ ಫೂತ್ಕರಿಸುತ್ತ ಆಘ್ರಾಣಿಸುವುದು! ಕ್ರೂರ ಮೃಗದ ಸಿನುಗು (ದುರ್ವಾಸನೆ), ಕೌರಹ (ಕೆಟ್ಟನಾತ) ದ ಬಿಸಿಯುಸಿರು ಮುಖಕ್ಕೆ ತೀಡುತ್ತಿರಲು ಕರಿಯ ಬಣ್ಣದ ಕಿರಾತ ಎಚ್ಚೆತ್ತು ಕಣ್ತೆರೆವನು. ಹಾ, ಮುಖದ ಮೇಲಿದೆ ಹಿರಿದಾದ ಕಱ್ಱನೆ ಕರಡಿಯ ಮೋರೆ! ನರನು ಕಣ್ಣು ತೆರೆದ ತಕ್ಷಣ ಆ ಕಾಡು ಮೃಗ ಬೆಚ್ಚಿ ಹೂಂಕರಿಸುತ್ತ ಕಾಡಿನ ಕಡೆಗೆ ಓಡಿ, ನುಣುಚಿಕೊಂಡು ಪಕ್ಕನೆ ಅಡಗಿಕೊಂಡಿತು.

ಬೇಡನಾದರೂ ತೆರೆದ ಕಣ್ಣುಗಳನ್ನು ಮುಚ್ಚಲಾರದೆ, ಕೂಗಲಾರದೆ ಚಲಿಸಲಾರದೆ ಅತಿ ಆಶ್ಚರ್ಯದಿಂದ ಕಂಗೆಡುವನು. ಬಲವಾದ ಗ್ರಹ ಬಡಿದಂತೆ ಮರಗಟ್ಟಿ ಹೋಗುವನು. ಕರಡಿ ಹೋದ ಕಡೆಗೆ ಮಂಕು ಮರುಳಾಗಿ ಮಿಳ್ಮಿಳನೆ ನೋಡುವನು!

ಹಾ! ಹಾಗೆಯೆ ತರುಣಿ ನಿಂತಳು. ತನ್ನ ಬಯಕೆಯ ಆರಾಧನೆಯ ಮೂರ್ತಿ, ತನ್ನಿಷ್ಟದೇವತೆ, ತನ್ನ ಒಲುಮೆಯ ಅರ್ಜುನನೆ ತನ್ನ ಎದುರಿನಲ್ಲಿ ಮೂಡಿದ್ದನು. ತಾನು ತಿಳಿಯದೆ ಮಾತಾಡಿದ ತನ್ನ ತಿಳಿಗೇಡಿತನಕ್ಕೆ, ಅವನು ಬಳಲಿ ಬೇಸತ್ತು ವನಮಧ್ಯದಲ್ಲಿ ಮರೆಯಾಗುತ್ತಿದ್ದನು!

ಹಾಗಿರುವಾಗ ಆಶ್ಚರ್ಯವು ಶೋಕಕ್ಕೆ ಎಡೆಗೊಟ್ಟು ಹೆಣ್ಣಿನ ಕಣ್ಣಿನಲ್ಲಿ ಬಿಸುಗಂಬನಿಯ ಹೊನಲು ಚಿಮ್ಮಿತು! ಸುತ್ತಲೂ ಚೈತ್ರೋದಯದ ವಿಪುಲ ಸಂಪತ್ತು ಹೊಳೆಯುತ್ತಿತ್ತು. ಆದರೇನು, ಆ ಕನ್ಯೆಯ ಆತ್ಮವನ್ನು ಅನಂತ ದಾರಿದ್ರ್ಯ ಆವರಿಸಿತ್ತು!

2

## ತಿಂಗಳ ಮೈಸಿರಿ ಪಡೆದ ಚಿತ್ರಾಂಗದೆ

ಅತನುದೇವ ನಿನ್ನಿಂದೆ ಬದುಕಿ ಬಾಳ್ದುದು ಜಗಜ್ಜೀವನಂ

ಹೇ ಮಧುರ ರಸಮಯ ಕಬ್ಬಿನ ಬಿಲ್ಲಿನಿಂದ ಶೋಭಿಸುತ್ತಿರುವ ದೇಹವಿಲ್ಲದ ಮನ್ಮಥ ದೇವನೆ, ರತಿಪತಿಯೆ, ನಿನ್ನದು ಮಾವು ತಾವರೆ ಅಶೋಕ ಪುಷ್ಪ ನೀಲ ನೈದಿಲೆ ಮಲ್ಲಿಗೆಯ ಹೂ ಬಾಣ. ಅದಕ್ಕೆ ಹೆಣ್ಣು ತುಂಬಿಗಳನ್ನು ಪೋಣಿಸಿ ಸಿಂಗರಿಸಿರುವೆ. ಆ ನಿನ್ನ ಬಿಲ್ಲಿನ ಹೆದೆ ಮಿಡಿವ ಇಂಪಾದ ಸವಿದನಿಗೆ ಈ ಬೃಹದ್‌ಬ್ರಹ್ಮ ಸೃಷ್ಟಿಯಲ್ಲಿ ಎದೆಸೋಲದಿರುವವರು ಇರುವರೆ?

ಆದಿಯಲ್ಲಿ ತಪಸ್ವಿಗಳ ಪ್ರಭು ಕಂದು ಬಣ್ಣದ ಜಡೆಮುಡಿಯ, ಹಣೆಗಣ್ಣಿನ ಶಿವನು ಭೀಷಣ ತಪಸ್ಸಾಧನಾಸಕ್ತಿಯಿಂದ ನಿರ್ವಿಕಲ್ಪ ಸಮಾಧಿಯಲ್ಲಿ ಮಗ್ನನಾಗಿದ್ದನು. ಆಗ ಸ್ವಾಮಿಯ ವಿರಾಗದಿಂದ ಸೃಷ್ಟಿ ರಸ ಆರಿ, ಜೀವರಾಶಿಗಳೆಲ್ಲರಿಗೆ ಉರಿ ಹೊತ್ತಿ ಬರುತ್ತಿತ್ತು. ರಾಕ್ಷಸರ ಕಾರಣದಿಂದ ಕ್ಷೇಮ ಕ್ಷಯಿಸುತ್ತಿತ್ತು. ಅಕಾಲದಲ್ಲಿಯೇ ಪ್ರಳಯ ಸಮೀಪಿಸಿದಂತೆ ಜಗತ್ತು ಕುದಿಗೊಂಡು ತಲ್ಲಣಿಸುತ್ತಿತ್ತು.

ಓ ರತಿಪತಿಯೆ, ನೀನು ಆಗ ಶಿವನ ಎದೆಗೆ ಕೆಚ್ಚಿನಿಂದ ಕುಸುಮಬಾಣವನ್ನು ಬಿಟ್ಟೆ. ಮುಕ್ಕಣ್ಣನ ಉರಿಗಣ್ಣಿಗೆ ಒಳಗಾದೆ! ನಿನ್ನಿಂದ ಜಗಜ್ಜೀವನವು ಬದುಕಿ ಬಾಳಿತು. ನಿನ್ನಿಂದ ಕಪರ್ದಿ ಶಂಕರನಾಗಿ, ಸುಕುಮಾರಿ ಗಿರಿಜೆಗೆ ಅರ್ಧ ದೇಹವನ್ನು ಕೊಟ್ಟು ಸೃಷ್ಟಿಯನ್ನು ಸದಾ ಪೊರೆಯುತ್ತಿರುವನು!

ಹೇ ಅನಂಗನೆ, ನಿನಗೆ ದೇಹವಿಲ್ಲದಿರುವುದರಿಂದ ಸರ್ವರದೇಹ ನೀನೇ ಆಗಿ ಜಗವನ್ನು ಆಳುತ್ತಿರುವೆ. ನಿನ್ನ ಅಧಿಕಾರಕ್ಕೆ ಅಡ್ಡಿ ಇಲ್ಲ. ಪ್ರಕೃತಿ ದೇವಿಯು ಸಾಗರ ತರಂಗಿಣಿಗಳಿಂದ ಅಭಿಷೇಕ ಮಾಡಿ, ಕಾನನದ ಉದ್ಯಾನಗಳ ನವ ಕುಸುಮಗಳನ್ನು ನಿನ್ನ ಮೇಲೆ ಚೆಲ್ಲಾಡುವಳು. ಗಿಳಿ ಕೋಗಿಲೆ ಮುಂತಾದ ಪಕ್ಷಿಗಳಿಂದ ಗೀತಾಂಜಲಿಯನ್ನು ಅರ್ಪಿಸುವಳು. ಬಂಗಾರದಂತೆ ಉಜ್ವಲವಾದ ಉದಯದ ಮಂಗಳಾರತಿಯನ್ನು ಎತ್ತಿ ರತಿಯ ರೂಪದಿಂದ ನಿನ್ನನ್ನು ಪ್ರತಿದಿನ ಪೂಜಿಸುವಳು!

ಹೇ ಮನ್ಮಥ, ನಿನ್ನ ಮಹಿಮೆಯು ಹೀಗಿರಲು, ನೀನೇ ಹೇಳು ನಿನ್ನ ಭುವನ ಸಮ್ಮೋಹನ ಮಧುರ ಮೋಹನಾಸ್ತ್ರವನ್ನು ಅಬಲೆ ಚಿತ್ರಾಂಗಿಯು ಹೇಗೆ ತಾನೆ ತಾಳಲು ಸಾಧ್ಯ?

ಅವಳು ಲಜ್ಜಾ ವಿಷಾದದಿಂದ ಕೊರಗಿ, ಪ್ರಣಯದ ಸೆಳೆತದಲ್ಲಿ ಕುಗ್ಗಿ ನಿಧಾನವಾಗಿ ಹೆಜ್ಜೆಯಿಡುತ್ತ ಶಿವಾಲಯಕ್ಕೆ ಬಂದಳು. ಪ್ರಾಂಗಣದಲ್ಲಿ ಒಡತಿಯನ್ನು ಕಂಡು ಉಲ್ಲಾಸದಿಂದ ಕೆನೆದು ನೆಗೆದಾಡುತ್ತಿದ್ದ ತನ್ನ ಕುದುರೆಯನ್ನು ಏರಿದಳು. ದೂರದಲ್ಲಿದ್ದ ಶಿಬಿರದ ಕಡೆಗೆ ನಡೆದಳು.

ತನ್ನ ಗಂಡಸುತನಕ್ಕೆ ಪೇಸಿದಳ್ ತಾನೆ ಚಿತ್ರಾಂಗದೆ.

ಬಿಳಿ ಬಣ್ಣದ ಆ ಯುದ್ಧಕುದುರೆಯು ಹಸುರು ಬನದಲ್ಲಿ ಸಾಗುತ್ತಿರುವಾಗ ಬಿಂಕಕ್ಕೆ ಕೊರಲು ಕೊಂಕಿಸಿತು. ತನ್ನ ಬೆನ್ನಿನಲ್ಲಿ ತನ್ನ ಪ್ರೀತಿಯ ಒಡತಿಯನ್ನು ಹೊತ್ತಿರುವ ಹೆಮ್ಮೆಗೆ ಖುರಪುಟಧ್ವನಿ ಗೈಯುತ್ತ ಕಾಡೇ ಕೆನೆಯುವ ರೀತಿಯಲ್ಲಿ ಹೇಷಾರವವನ್ನು ಮಾಡಿತು.

ಚಿತ್ರಾಂಗದೆ ಅದನ್ನು ಕಂಡು ತನ್ನ ಗಂಡಸುತನಕ್ಕೆ ಹೇಸಿದಳು. ಪರಾಕ್ರಮ ಅಚ್ಚೊತ್ತಿದ್ದ ಹಾಗಿರುವ ತನ್ನ ಮೈಕಟ್ಟನ್ನು ಜಿಗುಪ್ಸೆಯಿಂದ ನೋಡಿದಳು. ಆ ಹಸುರು ಬನದಲ್ಲಿ ನಿರಾಯುಧ ಲತಾಂಗಿಯರ ಲಾವಣ್ಯ ಪರಾಕ್ರಮವನ್ನು, ಅಬಲೆಯರ ಮಹಾಬಲವನ್ನು ಅತಿಶಯವಾಗಿ ನಿರೀಕ್ಷಿಸುತ್ತ ಚಿತ್ರಾಂಗದೆಯು ಚೈತ್ರವಾಹಿನಿಯಾಗಿ ಹರಿದು ಬರುತ್ತಿದ್ದಳು.

ಅವಳಿಗೆ ಮುಂದೆ ಕಣಿವೆಯ ಅಗಲಕ್ಕೆ ಹಬ್ಬಿ ನಿಂತಿದ್ದ ಸೈನ್ಯದ ಶಿಬಿರ ಕಾಣಿಸಿತು. ಅಲ್ಲಿ ತರತರಹದ ಬಣ್ಣಗಳಿಂದ ಡೇರೆಗಳು ಸಾಲುಸಾಲಾಗಿದ್ದವು. ಒಣಗಿದ ಹುಲ್ಲು ಎಲೆಗಳಿಂದ ಕಟ್ಟಿದ ಕುಟೀರಗಳಿದ್ದವು. ಅವು ಹಸಿರು ತಳಿರಿನ ಮಂಗಳದ ತೋರಣಗಳಿಂದ ಅಲಂಕರಣಗೊಂಡಿದ್ದವು. ಅವುಗಳ ಮೇಲೆ ವಿಜಯ ಧ್ವಜಪತಾಕೆಗಳು ಹಾರಾಡುತ್ತಿದ್ದವು. ಅಲ್ಲಲ್ಲಿ ಪಾಕಶಾಲೆಯಿಂದ ಹೊಮ್ಮಿಬಂದ ಹೊಗೆಯು ವಿವಿಧ ವಿನ್ಯಾಸಗಳಿಂದ ಆಗಸಕ್ಕೆ ಏರುತ್ತಿದ್ದವು.

ಸಮರ ವಿಶ್ರಾಂತ ಸೈನಿಕರ ಹಟ್ಟಿಯಿಂದ ಹರ್ಷ ಪ್ರದರ್ಶನ ಘೋಷ, ಜಯಗಾನ, ಹಾಸ್ಯ ಪರಿಹಾಸ್ಯದ ಶಬ್ದಗಳು ಹೊಮ್ಮಿ ಬರುತ್ತಿದ್ದವು. ಯುದ್ಧದ ಕುದುರೆಗಳ ಹೇಷಾರವ, ಆನೆಗಳ ಘೀಳು ಮತ್ತು ಜಯವನ್ನು ಸಾರುವ ಡಿಂಡಿಮ ಶಬ್ದಗಳಿಂದ ಆ ರಣ ಶಿಬಿರ ಕಳೆಗಟ್ಟಿತ್ತು. ಅದು ಚಲನಮಯವಾಗಿ, ನಾದಮಯವಾಗಿ, ಜೀವಮಯವಾಗಿ ಅಚ್ಚರಿಯ ಪಟ್ಟಣದ ವಿಸ್ತಾರ ವಿಲಾಸದಿಂದ ಶೋಭಿಸುತ್ತಿತ್ತು!

ಚಿತ್ರಾಂಗದೆಯು ಸೇನಾ ಶಿಬಿರದ ಬಾಗಿಲಲ್ಲಿ ತನ್ನನ್ನು ಇದಿರುಗೊಂಡು ಸಂತೋಷದಿಂದ ಸ್ವಾಗತವನ್ನಿತ್ತು ವಂದಿಸಿದ ಸಾಮಂತರನ್ನು ಸೇನಾನಿಗಳನ್ನು ಮತ್ತು ಗೌರವಕ್ಕೆ ಪಾತ್ರವಾದ (ಮನ್ನೆಯ)ವರನ್ನು ಆದರದಿಂದ ಕಂಡು ಉಚಿತ ನುಡಿಗಳಿಂದ ಮಾತಾಡಿಸಿದಳು. ಕಳೆದ ರಾತ್ರಿ ತಾನು ಬಾರದಿರುವುದಕ್ಕೆ ಆತಂಕ ಪಡುತ್ತಿದ್ದವರಿಗೆ ನೆಪವನ್ನು ಮಿತ ಭಾಷೆಯಲ್ಲಿ ಹೇಳುತ್ತ ಉದಾಸೀನದಿಂದ ಬೀಳ್ಕೊಂಡಳು.

ಆ ಅತಿಶಯ ಕಸುವಿನ ಕುದುರೆಯಿಂದ ನೆಲಕ್ಕೆ ಇಳಿದಳು. ಚಿನ್ನದ ಕೈಬಳೆ ಹೊಂದಿದ ಕಡಿವಾಣವನ್ನು ಕಿಂಕರನ ಕೈಗೆ ಕೊಟ್ಟಳು. ಆ ರಾಣಿಯು ಕನ್ಯೆಯರ ಸೇವೆಯನ್ನು ಸ್ವೀಕರಿಸುತ್ತ, ಬಂಗಾರ ಕುಶಲತೆಯ ರಮ್ಯ ಧ್ವಜ ಹಾರಾಡುತ್ತಿದ್ದ ಸೌಧವನ್ನು ಪ್ರವೇಶಿಸಿದಳು.

ವರುಣ (ಪಶ್ಚಿಮ) ದಿಕ್ಕಿನ ನಗರದಿಂದ ಹೊರಟ ನೆಳಲು ಎಂಬ ದಿವಸ ಯಾತ್ರಿಕನು ಪ್ರಾತಃಕಾಲದಿಂದ ನಡೆದು ಮಧ್ಯಾಹ್ನದಲ್ಲಿ ಬಿಸಿಲ ಬೇಗೆಗೆ ಕುಗ್ಗಿ ಕುಸಿದನು. ಅವನು ಮರಗಿಡಗಳ ಬುಡವನ್ನು ಆಶ್ರಯಿಸಿಕೊಂಡನು. ಅನಂತರ ಎದ್ದು ಇಂದ್ರ (ಪೂರ್ವ) ದಿಕ್ಕಿಗೆ ಎದುರಾಗಿ ಮುನ್ನಡೆಯಲು ಚಲಿಸುತ್ತಿದ್ದನು.

(ಸಶೇಷ)